ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 25-04-2016

ಪತ್ರಿಕಾ ಪ್ರಕಟಣೆ

# ಪರವಾನಗಿ ಹೊಂದದೆ ಔಷಧ ದಾಸ್ತಾನು ಮಾಡಿದಕ್ಕಾಗಿ ಮಾಲೀಕರಿಗೆ ದಂಡ

ಬೆಂಗಳೂರು, ಏಪ್ರಿಲ್ 25 (ಕರ್ನಾಟಕ ವಾರ್ತೆ)

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬಿ.ಎಂ. ರಸ್ತೆಯ ಸಂತೆಪೇಟೆಯಲ್ಲಿರುವ ಲಕ್ಷ್ಮಿ ಕ್ಲಿನಿಕ್‌ನಲ್ಲಿ ಔಷಧ ಪರವಾನಗಿ ಹೊಂದದೆ ಔಷಧ ದಾಸ್ತಾನು ಮಾಡಿದಕ್ಕಾಗಿ ಅದರ ಮಾಲೀಕರಾದ ಶ್ರೀ ಪ್ರಕಾಶ್ ಅವರಿಗೆ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ಪಿರಿಯಾಪಟ್ಟಣ ನ್ಯಾಯಾಲಯವು 90,000 ರೂ. ದಂಡ ಹಾಗೂ ಸಾದಾ ಜೈಲು ಶಿಕ್ಷೆಯನ್ನು ವಿಧಿಸಿದೆ.

ಸದರಿ ಪರವಾನಗೆ ಹೊಂದದ ಸಂಸ್ಥೆಗೆ ಔಷಧಗಳನ್ನು ಸರಬರಾಜು ಮಾಡಿದ ಸರಬರಾಜುದಾರರಾದ ಚಾಮ್ಲಾಲ್– ಹೀರಾ ಡ್ರಗ್ ಹೌಸ್, ಜೈರೂಪ್ –ರಾಮ್ ದೇವಸಿ, ಬಿ.ಎಲ್. ಶಂಕರ್–ರೇಣುಕಾ ಏಜೆನ್ಸೀ, ಕೆ.ವಿ. ಪ್ರಕಾಶ್– ಗಾಯತ್ರಿ ಎಂಟರ್‌ಪ್ರೈಸಸ್, ರಾಜೇಶ್ ಕುಮಾರ್ ಆರ್ –ಮಯೂರ್ ಏಜೆನ್ಸೀಸ್. ಕೆ. ರಮೇಶ್–ರಮೇಶ್ ಫಾರ್ಮಾ, ಪಾರ್ಥ ಸಾರಥಿ ಎಸ್–ಪ್ರಿಯಾ ಏಜೆನ್ಸೀಸ್, ಎ. ಸುಬ್ರಮಣ್ಯ– ಶ್ರೀಕಂಠೇಶ್ವರ ಫಾರ್ಮಾ, ಕೆ.ಎಮ್. ರವಿಕುಮಾರ್– ಶ್ರೀ ಶ್ರೀಕಂಠೇಶ್ವರ ಫಾರ್ಮಾ, ರಘುಪತಿ ಹೆಗಡೆ–ಶ್ರೀ ಶ್ರೀಕಂಠೇಶ್ವರ ಫಾರ್ಮಾ ಸಂಸ್ಥೆಗಳಲ್ಲಿ ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಗಳು ತನಿಖೆ ಕೈಗೊಂಡು ಔಷಧ ಮತ್ತು ಕಾಂತಿವರ್ಧಕ ಅಧಿನಿಯಮದ ಉಲ್ಲಂಘನೆಗೆ ಮೊಕದ್ದಮೆಯನ್ನು ಹೂಡಿದ ಮೇರೆಗೆ ಅವರಿಗೆಲ್ಲಾ ತಲಾ ರೂ 25,000/- ಗಳಂತೆ ಒಟ್ಟು 3,40,000/- ಗಳ ದಂಡಶುಲ್ಕವನ್ನು ಮತ್ತು ನ್ಯಾಯಾಲಯದ ಅವಧಿ ಮುಗಿಯುವವರೆಗೂ ಸಾದಾ ಜೈಲು ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಲಾಗಿದೆ.

ಈ ಪ್ರಕರಣದಲ್ಲಿ ಅಂದಿನ ಸಹಾಯಕ ಔಷಧ ನಿಯಂತ್ರಕರಾದ ಶ್ರೀ ವಿ.ಎಲ್. ಹಂಬರ್, ಮೈಸೂರು ವೃತ್ತ – 1 ಇವರ ಮೇಲ್ವಿಚಾರಣೆಯಲ್ಲಿ ಅಂದಿನ ಔಷಧ ಪರಿವೀಕ್ಷಕರಾದ ಶ್ರೀ ಎಂ. ಸುರೇಶ್, ಮೈಸೂರು – ವೃತ್ತ –1 ಇವರು ತನಿಖೆ ನಡೆಸಿ ಮೊಕದ್ದಮೆ ದಾಖಲಿಸಿದ್ದರೆಂದು ಔಷಧ ನಿಯಂತ್ರಣ ಕಚೇರಿಯ ಪ್ರಕಟಣೆಯು ತಿಳಿಸಿದೆ.

ಪೂರ್ಣಿಮಾ:ಜಿಪಿಆರ್.

# LAUNCH OF THE 'CHETANA' PROJECT AT MYSORE INFOSYS CAMPUS

Bangalore, April 25 (Karnataka Information)

The Department of IT, BT and S&T Government of Karnataka has the mandate to nurture and mentor students and acquaint them with technology.

The Department has associated with Samsung and Infosys to develop a program titled 'Chetana'. The program is targeted at girl students who have topped in SSLC exam from Government Schools across Karnataka. It is proposed to organize a 5-day residential camp with variety of activities that would ignite their interest in technology.

It is also pertinent to mention here that these girls are being given Laptops (chromebooks) by Samsung as part of their Corporate Social Responsibility. Our intention is to continue to handhold 'Chetana-Scholars' even post this workshop.

During this year, 356 girls who have topped in 2015are being invited to the residential workshop which will be conducted by our department in the Infosys campus in Mysore from the afternoon of April 25th to the afternoon of April 29th 2016. Honourable chief Minister has given his consent to launch the project on 28th April at Infosys campus. Other dignitaries like Honourable Minister for IT, BT and S&T and Houourable Minister for Education etc., have also been invited in addition to district Minister, Local MP, MLA and others.

Poornima:gpr

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನೂತನ ಕಟ್ಟಡದ ಶಂಕುಸ್ಥಾಪನೆ

ಬೆಂಗಳೂರು, ಏಪ್ರಿಲ್ 25 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಪ್ರಸನ್ನ ಕುಮಾರ್ ಬ್ಲಾಕಿನಲ್ಲಿರುವ ನಿವೇಶನದಲ್ಲಿ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಟಿ.ಬಿ. ಜಯಚಂದ್ರರವರು ಇತ್ತೀಚೆಗೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು ರಾಜ್ಯದಲ್ಲಿ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ಉತ್ಕೃಷ್ಟತೆಯನ್ನು ಸಾಧಿಸಲು, ರಾಜ್ಯ ಸಾಮಾಜಿಕ–ಆರ್ಥಿಕ ಅಗತ್ಯಗಳಿಗನುಸಾರವಾಗಿ ಉನ್ನತ ಶಿಕ್ಷಣದ ಸಾಮರಸ್ಯಕರ ಬೆಳವಣಿಗೆಗೆ ಮಾರ್ಗದರ್ಶನ ನೀಡಲು 2009 ರಲ್ಲಿ ಸ್ಥಾಪಿತವಾದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಶೀಘ್ರದಲ್ಲಿ ಸ್ವಂತ ಕಟ್ಟಡಕ್ಕೆ ಸ್ಥಳಾಂತರವಾಗುವಂತಾಗಲಿ ಎಂದು ಹಾರೈಸಿದರು. ಹಾಗೂ ಕಟ್ಟಡ ನಿರ್ಮಾಣ ಕಾರ್ಯವನ್ನು ವಹಿಸಿಕೊಂಡಿರುವ ಕರ್ನಾಟಕ ಗೃಹ ಮಂಡಳಿಯ ಅಧಿಕಾರಿಗಳಿಗೆ ಇದನ್ನು ನಿಗದಿತ ಅವಧಿಯಲ್ಲಿ ಪೂರೈಸಲು ತಿಳಿಸಿದರು.

ಇಡೀ ರಾಷ್ಟ್ರಕ್ಕೆ ಮಾದರಿಯಾಗಿರುವ ಮಾಹಿತಿ–ತಂತ್ರಜ್ಞಾನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ರಾಜ್ಯದಲ್ಲಿ ಅನುಷ್ಠಾನಗೊಂಡಿದ್ದಕ್ಕೆ ಹರ್ಷ ವ್ಯಕ್ತಪಡಿಸುತ್ತಾ ನಮ್ಮ ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಸ್ಥಾನಗಳನ್ನು ಗಳಿಸುವಂತಾಗಬೇಕು. ಇದನ್ನು ಸಾಧಿಸಬೇಕಾದರೆ ಉನ್ನತ ಶಿಕ್ಷಣ ಸಂಸ್ಥೆಗಳ ಅವಿಭಾಜ್ಯ ಅಂಗವಾಗಿರುವ ಪ್ರತಿಯೊಬ್ಬರೂ ಶಿಸ್ತನ್ನು ಅಳವಡಿಸಿಕೊಂಡು, ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು. ಇಡೀ ಜಗತ್ತಿಗೆ ಮಾದರಿಯಾಗಿದ್ದ ನಳಂದ, ತಕ್ಷಶಿಲೆಯಂಥ ವಿಶ್ವವಿದ್ಯಾಲಯಗಳೂ ವಿಶ್ವಮಾನ್ಯತೆ ಪಡೆಯಲು ಶಿಸ್ತು–ಬದ್ಧತೆ ಕಾರಣವೆಂದು ಸಚಿವರು ಅಭಿಪ್ರಾಯಪಟ್ಟರು.

ಭರತ್ ಲಾಲ್ ಮೀನಾ, ಐ.ಎ.ಎಸ್., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಪ್ರೊ. ಬಿ. ತಿಮ್ಮೇಗೌಡ, ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಎಸ್.ವಿ. ರಂಗನಾಥ್, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಡಾ. ಎಸ್. ಎ. ಕೋರಿ, ಪರಿಷತ್‌ನ ಕಾರ್ಯನಿರ್ವಾಹಕ ನಿರ್ದೇಶಕರು ಸೇರಿದಂತೆ ಪರಿಷತ್ತಿನ ಸದಸ್ಯರು, ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು ಉಪಸ್ಥಿತರಿದ್ದರು.

ಪೂರ್ಣಿಮಾ:ಜಿಪಿಆರ್.

# <u>ಸಚಿವರ ಪ್ರವಾಸ</u>

ಬೆಂಗಳೂರು, ಏಪ್ರಿಲ್ 25 (ಕರ್ನಾಟಕ ವಾರ್ತೆ)

ಪೌರಾಡಳಿತ, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರಾದ ಶ್ರೀ ಖಮರುಲ್ ಇಸ್ಲಾಂ ಅವರು ಏಪ್ರಿಲ್ 25 ರಿಂದ 30 ರವರೆಗೆ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು.

ಪೂರ್ಣಿಮಾ:ಜಿಪಿಆರ್.